ಕ್ರಮ ಸಂಖ್ಯೆ	ಕಂಪನಿಯ ಹೆಸರು	ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರಗಳ ಸಂಖ್ಯೆ
1	ಬೆ.ವಿ.ಸ.ಕಂ.	7
2	ಮ.ವಿ.ಸ.ಕಂ.	9
3	ಹು.ವಿ.ಸ.ಕಂ	7
4	ಗು.ವಿ.ಸ.ಕಂ	7
	ಒಟ್ಟು	**30**

ಈ ಕೇಂದ್ರಗಳಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ತ್ವರಿತವಾಗಿ ರಿಪೇರಿಗೊಳಿಸಿ, ಬದಲಾಯಿಸಲಾಗುತ್ತಿದೆ.

ಅಲ್ಲದೇ, ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯನ್ನು ಮತ್ತಷ್ಟು ತ್ವರಿತಗೊಳಿಸುವ ಸಲುವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು ತಲಾ 3 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಕ್ರಮ ತೆಗೆದುಕೊಳ್ಳುತ್ತಿವೆ.

677(1171) ಶ್ರೀ ಅಪ್ಪಾಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ರಾಜ್ಯ ಸರ್ಕಾರಿ ನೌಕರರಿಗೆ ಐದನೇ ವೇತನ ಆಯೋಗ ರಚನೆ ಕುರಿತ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಆಯೋಗ ರಚಿಸಲಾಗಿದೆಯೇ;

ಇ) ಇಲ್ಲದಿದ್ದಲ್ಲಿ, ಆಯೋಗವನ್ನು ಎಂದು ರಚಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಇದೆ.

ಆ) ಇಲ್ಲ.

ಇ) ಪೂರ್ವಭಾವಿ ಕ್ರಮಗಳನ್ನು ಶೀಘ್ರದಲ್ಲೇ ಕೈಗೊಳ್ಳಲಾಗುವುದು.

681(1590) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕು ನೊಣಬೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಖಾಸಗಿಯವರ ಜಾಗದಲ್ಲಿ ಕಟ್ಟಿರುವುದರಿಂದ ಅವರಿಗೆ ಬದಲಿ ಜಾಗ ಕೊಡಲು ಶಿವಮೊಗ್ಗ ಜಿಲ್ಲಾಧಿಕಾರಿಗಳು ಕಳುಹಿಸಿದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಹಳಿಸಿದ್ದು ಯಾವಾಗ; ಇದುವರೆಗೂ ಸರ್ಕಾರ ಪರ್ಯಾಯ ಭೂಮಿ ನೀಡಲು ಅನುಮತಿ ನೀಡದಿರುವುದಕ್ಕೆ ಕಾರಣ ಏನು; ಅನುಮತಿಯನ್ನು ಯಾವಾಗ ನೀಡಲಾಗುವುದು;

ಇ) ಈ ಪ್ರಕರಣದಲ್ಲಿ ನ್ಯಾಯಾಲಯವು ತೀರ್ಪು ನೀಡಿದೆಯೇ ಮತು ತೀರ್ಪಿನ ಸಾರಾಂಶ ಏನು:

ಈ) ಪರ್ಯಾಯ ಭೂಮಿಯನ್ನು ಸರ್ಕಾರ ಇನ್ನೂ ನೀಡದೇ, ಈ ಪ್ರೌಢಶಾಲೆಯ ದೈನಂದಿನ ಕಾರ್ಯಕ್ಕೆ ಹಾಗೂ ಅಭಿವೃದ್ಧಿ ಕಾರ್ಯಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು.

ಆ) ತೀರ್ಥಹಳ್ಳಿ ತಾಲ್ಲೂಕು, ಶಿರಗೂರು ಗ್ರಾಮದ ಸ.ನಂ.228 ರಲ್ಲಿ 2.00 ಎಕರೆ ಜಮೀನನ್ನು ನೊಣಬೂರು ಸರ್ಕಾರಿ ಪ್ರೌಢಶಾಲೆಗೆ ಶ್ರೀ ಶ್ರೀನಿವಾಸ ಉಡಪ ಇವರು ಬಿಟ್ಟುಕೊಡಲು ಒಪ್ಪಿರುವುದರಿಂದ ಇದರ ಬದಲಾಗಿ ಶಿರಗೂರು ಗ್ರಾಮ ಸ.ನಂ.15 ರಲ್ಲಿ 2.00 ಎಕರೆ ಜಮೀನು ಮಂಜೂರಾತಿಗೆ ಜಿಲ್ಲಾಧಿಕಾರಿಗಳಿಂದ ದಿನಾಂ: 15.06.2004 ರಂದು ಬಂದಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಈ) ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

682(1592) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಯುವಜನ ಸೇವಾ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ನಿಗಧಿ ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು;

ಆ) ಇಲಾಖೆ ವತಿಯಿಂದ ನಡೆಸುತ್ತಿರುವ ಕ್ರೀಡಾ ವಸತಿ ನಿಲಯಕ್ಕೆ ಈ ಸಾಲಿನಲ್ಲಿ ನಿರ್ವಹಣೆ, ಭೋಜನ ವೆಚ್ಚ, ಬಟ್ಟೆ ಇತ್ಯಾದಿಗಳಿಗೆ ಬೇಕಾಗುವ ಹಣ ಎಷ್ಟು, ಈ ವರ್ಷ ನಿಗಧಿ ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಹಣ ಎಷ್ಟು;

ಇ) ವಸತಿ ನಿಲಯ ವಿದ್ಯಾರ್ಥಿಗಳಿಗೂ ಭೋಜನ ವೆಚ್ಚಕ್ಕೂ ಸಾಲದಷ್ಟು ಹಣ ನಿಗಧಿ ಮಾಡಿರುವುದಕ್ಕೆ ಕಾರಣಗಳೇನು;

ಈ) ಸರ್ಕಾರ ಕ್ರೀಡಾಳುಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಸಂಪೂರ್ಣ ಸ್ಥಗಿತಗೊಳಿಸಲು ತೀರ್ಮಾನಿಸಿದೆಯೇ;

ಉ) ರಾಜ್ಯದಲ್ಲಿ ಎಷ್ಟು ರಾಜೀವಗಾಂಧಿ ಯುವಶಕ್ತಿ ಸಂಘಗಳು ಅಸ್ತಿತ್ವದಲ್ಲಿವೆ; ಇವುಗಳಿಗೆ ಇದುವರೆಗೆ ಬಿಡುಗಡೆ ಮಾಡಿದ ಹಣ ಎಷ್ಟು (ಜಿಲ್ಲಾವಾರು ನೆರವು ನೀಡಿದ ಸಂಘಗಳ ಸಂಖ್ಯೆ ನಮೂದಿಸಿ ವಿವರ ನೀಡುವುದು):

ಊ) ಈ ಸಾಲಿನಲ್ಲಿ ಈ ಸಂಘಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ; ಮಾಡದಿದ್ದಲ್ಲಿ, ಕಾರಣಗಳೇನು:

ಋ) ಈ ಸಂಘಗಳನ್ನು ಸ್ಥಾಪಿಸಿದ ಉದ್ದೇಶಗಳೇನು; ಈ ನಿಟ್ಟಿನಲ್ಲಿ ಅವು ಹಮ್ಮಿಕೊಂಡ ಕಾರ್ಯಕ್ರಮಗಳೇನು?